**ಸಾಕ್ಷಿಯನ್ನು ದಿನಾಂಕಃ 27-06-2024 ರಂದು ಕರೆಯಿಸಿ ಪ್ರಮಾಣ ವಚನ ನೀಡಲಾಯಿತು.**

**ಪಾಟೀ ಸವಾಲು ಪ್ರತಿವಾದಿ ಪರ ಶ್ರೀ. ಜಿ ಎಂ ಕೆ ವಕೀಲರವರಿಂದಃ**

ಸಾಮಾನ್ಯವಾಗಿ ಆಸ್ತಿಯ ಮಾಲೀಕರೊಂದಿಗೆ ವ್ಯವಹಾರ ನಡೆಯುತ್ತದೆ ಎಂದರೆ ಸರಿ. ಪ್ರತಿವಾದಿಗಳು ನನಗೆ ಕಳೆತ 50-55 ವರ್ಷಗಳಿಂದ ಪರಿಚಯ ಇರುವರು. ಪ್ರತಿವಾದಿಗಳ ಮನೆತನದ ಹೆಸರು ರಾಚಪ್ಪ ಚನ್ನವೀರಯ್ಯ ಎಂದರೆ ಸರಿ. ಪ್ರತಿವಾದಿಗಳು 40 ವರ್ಷಗಳ ಹಿಂದೆ ಪಾಲು ವಿಭಾಗವನ್ನು ಮನೆತನದ ಸಂಬಂಧಿಸಿದಂತೆ ಮಾಡಿಕೊಂಡಿರುವರು ಎಂದರೆ ಸರಿ. ವ್ಯವಹಾರದ ಕಾಲಕ್ಕೆ ದಾವಾ ಆಸ್ತಿಯ ಚಾಲ್ತಿ ಪಹಣಿ ಚನ್ನವೀರಯ್ಯನ ಹೆಸರಿನಲ್ಲಿತ್ತು. ವೀರಯ್ಯನ ಭಾಗ ಜಮೀನನ್ನು ನನಗೆ ಬರೆದುಕೊಟ್ಟಿರುವರು. ಸುಮಾರು 31 ವರ್ಷಗಳ ಹಿಂದೆ ದಾವಾ ಆಸ್ತಿಗೆ ಸಂಬಂಧಿಸಿದಂತೆ ನನ್ನ ಹಾಗೂ 1 ನೇ ಪ್ರತಿವಾದಿಯ ನಡುವೆ ವ್ಯವಹಾರ ನಡೆದಿರುತ್ತದೆ. ಅದಕ್ಕಿಂತ ಪೂರ್ವದಲ್ಲಿ ಒಂದು ವಾರ ಮುಂಚೆ ಖರೀದಿ ಕುರಿತು ಮೌಖಿಕ ಮಾತುಕತೆ ಮಾಡಿರುತ್ತೇವೆ. ಆ ಸಮಯದಲ್ಲಿ 2 ನೇ ಪ್ರತಿವಾದಿಯ ಗಂಡನಾದ ಚನ್ನವೀರಯ್ಯ ಅಲ್ಲಿ ಇರಲಿಲ್ಲ. ವ್ಯವಹಾರ ಮಾಡುವ ಕಾಲಕ್ಕೆ 2 ಮತ್ತು 3 ನೇ ಪ್ರತಿವಾದಿಯನ್ನು ನಾನು ವಿಚಾರಣೆ ಮಾಡಿರುವುದಿಲ್ಲ.

ವ್ಯವಹಾರ ಮಾಡುವ ಮೊದಲು 2 ಮತ್ತು 3 ನೇ ಪ್ರತಿವಾದಿಯ ವಾರಸುದಾರರನ್ನು ವಿಚಾರಣೆ ಮಾಡಿರುವುದಿಲ್ಲ. 2 ಮತ್ತು 3 ನೇ ಪ್ರತಿವಾದಿಯರಿಗೆ ತೊಂದರೆ ಕೊಡಲು ಕರಾರನ್ನು ಸೃಷ್ಟಿಸಿದ್ದೇನೆ ಎಂದರೆ ಸರಿಯಲ್ಲ. ನಾನು ಹಾಗೂ 1 ನೇ ಪ್ರತಿವಾದಿ ಈಗಲೂ ಅನ್ಯೋನ್ಯವಾಗಿದ್ದೇವೆ ಎಂದರೆ ಸರಿ. ಕರಾರು ಪತ್ರದ ಆಧಾರದ ಮೇಲೆ ಕ್ರಯ ಪತ್ರ ಮಾಡಿಕೊಡುವಂತೆ 1 ನೇ ಪ್ರತಿವಾದಿಗೆ ಮುಂಚೆನಿಂದಲೂ ಕೇಳಿಕೊಂಡು ಬಂದಿದ್ದೇನೆ. ನಾನು ನಿರಂತರವಾಗಿ ಅಂದರೆ 1992-93 ನೇ ಸಾಲಿನಲ್ಲಿಯೂ ಕೂಡ ಕ್ರಯ ಪತ್ರ ಮಾಡಿ ಕೊಡುವಂತೆ 1 ನೇ ಪ್ರತಿವಾದಿಯನ್ನು ಕೇಳಿದ್ದೇನೆ. ಆಗ ಅವರು ದಾವಾ ಆಸ್ತಿಯು 2 ಮತ್ತು 3 ನೇ ಪ್ರತಿವಾದಿಯರ ಹೆಸರಿಗೆ ಖಾತೆಯಾಗಿದೆ, ಅವರಿಂದ ತನ್ನ ಹೆಸರಿಗೆ ಬರೆಸಿಕೊಂಡ ನಂತರ ಕ್ರಯ ಪತ್ರ ಮಾಡಿಕೊಡುತ್ತೇನೆ ಎಂದು ಹೇಳಿದರು. ನಾನು 1992-93 ನೇ ಸಾಲಿನಲ್ಲಿ ಆ ರೀತಿ 1 ನೇ ಪ್ರತಿವಾದಿ ಹೇಳಿದ 2 ಮತ್ತು 3 ನೇ ಪ್ರತಿವಾದಿಯನ್ನು ವಿಚಾರಿಸಿರುವುದಿಲ್ಲ. 1992-93 ನೇ ಸಾಲಿನಲ್ಲಿ ವೀರಯ್ಯ 2 ಮತ್ತು 3 ನೇ ಪ್ರತಿವಾದಿಗಳ ಹೆಸರಿನಿಂದ ತನ್ನ ಹೆಸರಿಗೆ ಖಾತೆಯಾದ ನಂತರ ಕ್ರಯ ಪತ್ರವನ್ನು ಬರೆದುಕೊಡುತ್ತೇನೆಂದು ಹೇಳಿದಾಗ ನಾನು ಆತನಿಗೆ ಲೀಗಲ್ ನೋಟಿಸು ಕೊಟ್ಟಿರುತ್ತೇನೆ. ಸದರಿ ನೋಟಿಸಿದ ಪ್ರತಿಯನ್ನು ನಾನು ನ್ಯಾಯಾಲಯಕ್ಕೆ ಹಾಜರುಪಡಿಸಿರುವಿರ ಎಂಬ ವಕೀಲರ ಪ್ರಶ್ನೆಗೆ ಸಾಕ್ಷಿಯು 1992-93 ರಲ್ಲಿ ನೋಟಿಸು ನೀಡಿರುವುದಿಲ್ಲ, ಆದರೆ ಇತ್ತೀಚೆಗೆ ನೀಡಿದ್ದೇನೆ ಎಂದು ನುಡಿದರು.

1992-93 ನೇ ಸಾಲಿನಿಂದ ನಾನು ದಾವಾ ದಾಖಲು ಮಾಡುವ ದಿನಾಂಕದವರೆಗೆ ನಾನು 1ನೇ ಪ್ರತಿವಾದಿಯ ವಿರುದ್ಧ ಯಾವುದೇ ಕಾನೂನು ಕ್ರಮ ತೆಗೆದುಕೊಂಡಿರುವುದಿಲ್ಲ. ನಿಪಿ-1 ಕರಾರು ಪತ್ರವನ್ನು ಜಂಗಮತುಂಬಿಗೇರಿ ಗ್ರಾಮದಲ್ಲಿ ಬರೆದುಕೊಟ್ಟಿರುವರು. ಅದರಲ್ಲಿ ಏನು ಬರೆದಿದೆ ಎಂದು ನನಗೆ ಗೊತ್ತಿದೆ. ನಿಪಿ-1 ದಾಖಲೆಯನ್ನು ಪ್ರತಿವಾದಿ 1 ರವರು ಬರೆದುಕೊಟ್ಟಿರುವುದಿಲ್ಲ ಆದರೆ ಬರೆಸಿಕೊಟ್ಟಿರುವರು. ನಿಪಿ-1 ದಾಖಲೆಯಲ್ಲಿ **"ಬರೆದು ಬರೆಸಿಕೊಟ್ಟ ಭೂಮಿ"** ಎಂದು ಉಲ್ಲೇಖ ಇದೆ ಎಂದರೆ ಸರಿ. ಸದರಿ ದಾಖಲೆಯಲ್ಲಿ 1ನೇ ಪ್ರತಿವಾದಿಯ ತಂದೆಯ ಹೆಸರನ್ನು ಬ್ರಾಕೇಟಿನಲ್ಲಿ ಕಾಣಿಸಲಾಗಿದೆ ಎಂದರೆ ಸರಿ.

ಸಾಮಾನ್ಯವಾಗಿ ಒಂದು ದಸ್ತಾವೇಜನ್ನು ಬರೆದ ನಂತರ ಬರೆದುಕೊಟ್ಟವರು, ಬರೆಸಿಕೊಂಡವರು ಮತ್ತು ಸಾಕ್ಷಿದಾರರು ಸಹಿ ಹಾಕುವರು ಎಂದರೆ ಸರಿ. ಒಂದು ಸ್ಥಳದಲ್ಲಿ ದಾಖಲೆಯನ್ನು ಬರೆದು ಸಹಿಯನ್ನು ತೆಗೆದುಕೊಳ್ಳಲು ಬೇರೆ ಕಡೆಗೆ ಸದರಿ ದಾಖಲೆಯನ್ನು ತೆಗೆದುಕೊಂಡು ಹೋಗುವ ಸಮಯದಲ್ಲಿ ಸಹಿ ಮಾಡಬೇಕಾದ ಜಾಗದಲ್ಲಿ ಗುಣಾಕಾರದ ಚಿಹ್ನೆಯನ್ನು ಹಾಕುವರು ಎಂದರೆ ಸರಿ. ನಿಪಿ-1 ರಲ್ಲಿ ಗುಣಾಕಾರದ ಚಿಹ್ನೆ ಇದೆ ಎಂದರೆ ಸರಿ. ನನಗೂ, 2ನೇ ಪ್ರತಿವಾದಿಯ ಗಂಡನಾದ ಚನ್ನವೀರಯ್ಯನಿಗೂ ಸಂಬಂಧ ಸರಿ ಇರಲಿಲ್ಲ ಎಂದರೆ ಸರಿಯಲ್ಲ. ಆ ಕಾರಣಕ್ಕಾಗಿ ಆಕೆಗೆ ಮತ್ತು 3ನೇ ಪ್ರತಿವಾದಿಗೆ ತೊಂದರೆ ಕೊಡಲು ನಾನು ಹಾಗೂ 1ನೇ ಪ್ರತಿವಾದಿ ಮೀಲಾಪಿಯಾಗಿ ನಿಪಿ-1ನ್ನು ಸೃಷ್ಟಿಸಿದ್ದೇವೆ ಎಂದರೆ ಸರಿಯಲ್ಲ. 2ನೇ ಪ್ರತಿವಾದಿ ನನ್ನ ಹಾಗೂ 1ನೇ ಪ್ರತಿವಾದಿಯ ವಿರುದ್ಧ ಅಸಲು ದಾವಾ ನಂ.160/2016 ನ್ನು ಹಾಕಿರುವರು ಎಂದರೆ ನನಗೆ ಮಾಹಿತಿ ಇಲ್ಲ.

**ಮರು ವಿಚಾರಣೆ ಇಲ್ಲ**

(ತೆರೆದ ನ್ಯಾಯಾಲಯದಲ್ಲಿ ಸಾಕ್ಷಿಯ ಹೇಳಿಕೆಯಂತೆ ನನ್ನ ಉಕ್ತ ಲೇಖನಕ್ಕೆ ಬೆರಳಚ್ಚು ಮಾಡಲಾಯಿತು.)

**ಓ ಹೇ ಕೇ ಸರಿಯಿದೆ.**

**ಸಿವಿಲ್ ನ್ಯಾಯಾಧೀಶರು ಮತ್ತು**

**ಜೆ.ಎಂ.ಎಫ್.ಸಿ. ಹರಪನಹಳ್ಳಿ**